ಓ.ಎಸ್.ನಂ.12/2017

ದಿನಾಂಕಃ 21-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ1

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಡಿ ಎನ್ ಪಿ ವಕೀಲರಿಂದಃ-**

ನಾನು ಗ್ರಾಮ ಪಂಚಾಯಿತಿಯ ಸದಸ್ಯ ಆಗಿರುವುದಿಲ್ಲ. ನನ್ನ ತಂದೆಯು 1985-89 ರ ವರೆಗೆ ಮಂಡಳ ಪಂಚಾಯಿತಿಯ ಸದಸ್ಯರಾಗಿದ್ದರು. ಖಾತೆಯ ಸಂಖ್ಯೆಃ 37 ಕ್ರಯಪತ್ರದಂತೆ ಇದ್ದದ್ದು ಖಾತೆ ಸಂಖ್ಯೆಃ 424/ಎ ಎಂದು 1982-83 ನೇ ಸಾಲಿನಲ್ಲಿ ಬದಲಾವಣೆಯಾಗಿರುತ್ತದೆ. ನಿಪಿ- 8 ಕ್ರಯಪತ್ರದಲ್ಲಿ ಪೂರ್ವ- ಪಶ್ಚಿಮ 18 ಗಜ ಎಂದು ಇರುತ್ತದೆ ಎಂದರೆ ಸಾಕ್ಷಿಯು ಹೇಳುವುದೇನೆಂದರೆ, ಪಂಚಾಯಿತಿಯವರು ಅಳತೆ ಮಾಡಿ ಪೂರ್ವ- ಪಶ್ಚಿಮ 14 ಗಜ ಎಂದು ಉತ್ತರ ದಕ್ಷಿಣ 18 ಗಜ ಎಂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪಂಚಾಯಿತಿಯವರಿಗೆ ನಾನು ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಆದರೆ, ಪಂಚಾಯಿತಿಯವರು ದಾಖಲೆಗಳನ್ನು ನೋಡಿ ಮಾಡಿರುತ್ತಾರೆ. ಸದರಿ ಪಂಚಾಯಿತಿಯವರು ಬಂದು ಅಳತೆ ಮಾಡಿದ ನಂತರ ನಿಪಿ-8 ಕ್ರಯಪತ್ರದಲ್ಲಿ ಬದಲಾವಣೆ ಮಾಡಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಹೇಳುವುದೇನೆಂದರೆ, ನಮಗೆ ಮಾರಾಟ ಮಾಡಿದವರು ಮೃತ ಪಟ್ಟಿದ್ದರು ಮತ್ತು ಅವರ ವಾರಸುಧಾರರು ಯಾರು ಇರುವುದಿಲ್ಲ ಆ ಕಾರಣದಿಂದ ತಿದ್ದುಪಡಿ ಮಾಡಿರುವುದಿಲ್ಲ. ನನಗೆ ಮಾರಾಟ ಮಾಡಿದವರು 1984-85 ರಲ್ಲಿ ಮೃತ ಪಟ್ಟಿರುತ್ತಾರೆ. ಸದರಿ ಅಳತೆಯನ್ನು ಮಾಡುವ ಸಮಯದಲ್ಲಿ ಯಾವುದೇ ಮಹಜರ್ ಅನ್ನು ಮಾಡಿರುವುದಿಲ್ಲ. ಪಂಚಾಯಿತಿಯವರು ಸ್ದಳಕ್ಕೆ ಬಂದಿರುವುದಿಲ್ಲಮತ್ತು ಯಾವುದೇ ಮಹಜರ್ ಅನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯು ಪಂಚಾಯಿತಿಯ ಸದಸ್ಯರಾಗಿರುವುದನ್ನು ದುರುಪಯೋಗ ಪಡಿಸಿಕೊಂಡು ನಾವೇ ವಿಸ್ತೀರ್ಣವನ್ನು ನಾವೇ ತಿದ್ದುಪಡಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-8 ಕ್ರಯಪತ್ರದ ಪ್ರಕಾರ ದಕ್ಷಿಣಕ್ಕೆಃ ಹನುಮಣ್ಣರವರ ಹುಲ್ಲಿನ ಹಿತ್ತಲು ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಈಗಲೂ ಸಹ ದಕ್ಷಿಣಕ್ಕೆಃ ಹನುಮಣ್ಣರವರ ಹುಲ್ಲಿನ ಹಿತ್ತಲಿನಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಆದ್ದರಿಂದ ನಾನು ಈದಾವೆಯನ್ನು ಸಲ್ಲಿಸಿರುತ್ತೇನೆ.

ಪ್ರತಿವಾದಿಯು ನನ್ನ ದಾವಾ "ಬಿ" ಶೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂಬುದನ್ನು ತೋರಿಸಲು ದಾಖಲಾತಿಗಳು ಇರುತ್ತವೆ. ನಾನು ನ್ಯಾಯಾಲಯಕ್ಕೆ ನಿಪಿ-1 ರಿಂದ 8 ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ಪ್ರತಿವಾದಿಗಳು ನನ್ನ ಆಸ್ತಿಯಲ್ಲಿ ಅತಿಕ್ರಮ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸುಮಾರು ವರ್ಷಗಳಿಂದ ಬಿ ಶೆಡ್ಯೂಲ್ ನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ನನ್ನ ಆಸ್ತಿಯನ್ನು ಅಳತೆ ಮಾಡಿ ಕಲ್ಲುಕಂಬಗಳನ್ನು ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಆಸ್ತಿಗಳನ್ನು ಅಳತೆ ಮಾಡಿಸಲು ನನ್ನದು ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಪೊಲೀಸ್ ಠಾಣೆಗೆ ದೂರು ನೀಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ಮರು ವಿಚಾರಣೆಃ ಇರುವುದಿಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ಈರಪ್ಪ ಢವಳೇಶ್ವರ್)
**2 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.**